**9 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.**

**ಎಸ್.ಸಿ.ನಂ.139/2019**

**(ಚಾ.ಸಾ.9/ಪ್ರಾ.ಸಾ.5)**

ತಾಃ16-01-2023 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು: | ಫರ್ಝೇಜ್ ಖಾನ್ |
| ತಂದೆಯ ಹೆಸರು | ಭಾಷಾ ಖಾನ್ |
| ವಯಸ್ಸು | 40 ವರ್ಷ |
| ಉದ್ಯೋಗ | ವ್ಯಾಪಾರ |
| ವಾಸ ಸ್ಥಳ | ವೈಟ್ ಫೀಲ್ಡ್ |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

1. ನನಗೆ ಚಾಸಾ.1 ಹಾಗೂ ಅವರ ಮಗ ನವಾಜ್ ಇವರ ಪರಿಚಯ ಇರುತ್ತದೆ. 2018 ನೇ ಸಾಲಿನಲ್ಲಿ ನವಾಜ್ ಇವರು ಮೃತಪಟ್ಟಿರುತ್ತಾರೆ. 5 ನೇ ಆರೋಪಿ ನವಾಜ್ ಇವರ ಪತ್ನಿ ಆಗಿರುತ್ತಾರೆ. ನನಗೆ 1 ರಿಂದ 4 ನೇ ಆರೋಪಿತರ ಪರಿಚಯ ಇರುತ್ತದೆ. ಅದೇ ರೀತಿ ಚಾಸಾ.8 ರವರ ಪರಿಚಯ ಇರುತ್ತದೆ. ಸಾಕ್ಷಿದಾರರು ಪೋಲೀಸರು ನೀಡಿದ ನೋಟೀಸ್ ಹಾಗೂ ಮಹಜರ್ ನಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ.31, 32 ಹಾಗೂ ಸಾಕ್ಷಿದಾರರ

ಸಹಿಯನ್ನು ನಿಪಿ.31(ಎ) ಮತ್ತು ನಿಪಿ.32(ಎ) ಎಂದು ಗುರುತಿಸಲಾಯಿತು. ಪೋಲೀಸರು ದಿನಾಂಕ 25-08-2018 ರಂದು ಬೆಳಿಗ್ಗೆ 07:00 ಗಂಟೆಗೆ ನನಗೆ ನೋಟೀಸ್ ನೀಡಿದ್ದರು. ನಾನು ಠಾಣೆಗೆ ಬೆಳಿಗ್ಗೆ 07:45 ರಿಂದ 08:00 ಗಂಟೆ ಸಮಯದಲ್ಲಿ ಹೋಗಿದ್ದೆನು. ನಾನು ಠಾಣೆಗೆ ಹೋದಾಗ ಠಾಣೆಯಲ್ಲಿ 4 ಜನ ಆರೋಪಿತರು ಹಾಗೂ ಮೃತ ನವಾಜ್ ಇವರ ಹೆಂಡತಿ ಇದ್ದರು. ಪೋಲೀಸರು ಚಾಸಾ.8 ರವರಿಗೂ ನೋಟೀಸ್ ನೀಡಿದ್ದು, ನಾನು ಹೋದ 10 ನಿಮಿಷದ ನಂತರ ಅವರೂ ಠಾಣೆಗೆ ಬಂದಿದ್ದರು.

2. ಪೋಲೀಸರು ನಾವು ಠಾಣೆಗೆ ಹೋದಾಗ ಠಾಣೆಯಲ್ಲಿದ್ದ ವ್ಯಕ್ತಿಗಳು ನವಾಜ್ ಇವರನ್ನು ಕೊಲೆ ಮಾಡಿದ ಆರೋಪಿಗಳಾಗಿದ್ದು, ಅವರು ತಮ್ಮನ್ನು ಕರೆದುಕೊಂಡು ಹೋಗುತ್ತಿದ್ದು, ಮಹಜರ್ ಗೆ ಸಹಕರಿಸುವಂತೆ ನಮಗೆ ತಿಳಿಸಿರುತ್ತಾರೆ. ಪೋಲೀಸರು ಆರೋಪಿತರನ್ನು ವಿಚಾರಿಸಿದಾಗ ಅಲ್ಲಿ ಬೈಕ್, ಕಾರ್ ಇದ್ದು ಕೊಲೆ ಮಾಡಲು ಉಪಯೋಗಿಸಿದ ಆಯುಧಗಳಿರುವುದಾಗಿ ನಮ್ಮ ಮುಂದೆ ಹೇಳಿರುತ್ತಾರೆ. ಅದೇ ರೀತಿ ಆರೋಪಿತರು ಘಟನೆ ಸಮಯದಲ್ಲಿ ಧರಿಸಿದ್ದ ಬಟ್ಟೆಗಳನ್ನು ಸದರಿ ಸ್ಥಳದಲ್ಲಿ ಇಟ್ಟಿದ್ದು, ಅವುಗಳನ್ನು ಹಾಜರುಪಡಿಸುವುದಾಗಿ ಪೋಲೀಸರ ಮುಂದೆ ಹೇಳಿರುತ್ತಾರೆ. ಪೋಲೀಸರು ಹಾಗೂ ಆರೋಪಿತರು ಜೀಪ್ ನಲ್ಲಿ ಹೋಗಿದ್ದು, ನಾನು, ಚಾಸಾ.8 ರವರು ಚಾಸಾ.1 ರವರು ಚಲಿಸಿಕೊಂಡು ಹೋದ ಕಾರಿನಲ್ಲಿ ಪೋಲೀಸ್ ಜೀಪ್ ಅನ್ನು ಹಿಂಬಾಲಿಸಿರುತ್ತೇವೆ.

3. ಆರೋಪಿತರು ನಮ್ಮನ್ನು ಕ್ಯಾಲನೂರು ಗ್ರಾಮ ಆದ ನಂತರ ಇದ್ದಂತಹ ಒಂದು ತೋಟದ ಮನೆಗೆ ಕರೆದುಕೊಂಡು ಹೋಗಿದ್ದು, ಅದು ಕುರಿ ಕಟ್ಟುವ ಶೆಡ್ ಆಗಿರುತ್ತದೆ. ಸ್ಥಳದಲ್ಲಿ ವಿಚಾರಿಸಿದಾಗ ಆ ಜಾಗ ನಾರಾಯಣಸ್ವಾಮಿ ಇವರಿಗೆ ಸೇರಿರುವುದಾಗಿ ಸ್ಥಳೀಯರು ತಿಳಿಸಿರುತ್ತಾರೆ. ಶೆಡ್ ಒಳಗೆ ಮೃತ ನವಾಜ್ ಇವರಿಗೆ ಸೇರಿದ ಒಂದು ಬೈಕ್, 1ನೇ ಆರೋಪಿಗೆ ಸೇರಿದ ಮತ್ತೊಂದು ಬೈಕ್ ಇತ್ತು. ಕಾರನ್ನು ಸಹ ಶೆಡ್ ನಿಂದ ಹೊರಗೆ ನಿಲ್ಲಿಸಿದ್ದರು. ಆರೋಪಿತರು ಕಾರ್ ಡಿಕ್ಕಿಯಲ್ಲಿಟ್ಟಿದ್ದ 2 ಚಾಕು, 2 ರಾಡ್ ಗಳನ್ನು ಪೋಲೀಸರಿಗೆ ತೋರಿಸಿರುತ್ತಾರೆ. ಆರೋಪಿತರು ಸದರಿ ವಸ್ತುಗಳನ್ನು ತೋರಿಸಿದ ನಂತರ ಅದನ್ನು ಒಂದು ಬಿಳಿ ಬಟ್ಟೆಯ ಒಳಗೆ ಹಾಕಿ ಅದರ ಮೇಲೆ ಚೀಟಿ ಅಂಟಿಸಿ ನಮ್ಮ ಸಹಿ ಪಡೆದಿರುತ್ತಾರೆ. ಸಾಕ್ಷಿದಾರರು ಮು.ಮಾ.3 ರಿಂದ 7ರ ವಸ್ತುಗಳನ್ನು ನೋಡಿ ಗುರುತಿಸಿದ್ದು, ಅವುಗಳಿಗೆ ಸುತ್ತಿದ ಬಟ್ಟೆಯ ಕವರ್ ಮೇಲೆ ತಮ್ಮ ಸಹಿ ಇರುವುದನ್ನು ಗುರುತಿಸಿರುತ್ತಾರೆ. ಆರೋಪಿತರು ರಾಡ್ ಗಳನ್ನು, ಚಾಕುಗಳನ್ನು ಪೋಲೀಸರಿಗೆ ತೋರಿಸುವ ಸಮಯದಲ್ಲಿ ಅವುಗಳ ಮೇಲೆ ರಕ್ತ ಇತ್ತು.

4. ಸ್ಥಳದಲ್ಲಿ ಇದ್ದ ಕಾರು ಸಿಲ್ವರ್ ಬಣ್ಣದ ಟೊಯೋಟಾ ಇಟಿಯೋಸ್ ಕಾರ್ ಆಗಿತ್ತು. ಕಾರ್ ಡಿಕ್ಕಿಯ ಒಳಗೆ ಸದರಿ ಆಯುಧಗಳು ಹಾಗೂ ಬಟ್ಟೆಗಳು ಇರುವುದು ಕಂಡುಬಂದಿದ್ದು, ಬಟ್ಟೆಗಳ ಮೇಲೆ ರಕ್ತದ ಕಲೆ ಇತ್ತು.

5. ಈ ಹಂತದಲ್ಲಿ ಮಾನ್ಯ ಪಿ.ಪಿ.ರವರು 8 ಸೀಲ್ ಆದ ಬಟ್ಟೆ ಕವರ್

ಅನ್ನು ಓಪನ್ ಮಾಡಿ ಸಾಕ್ಷಿದಾರರಿಗೆ ತೋರಿಸಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು. ಅದರಂತೆ 8 ಸೀಲ್ಡ್ ಬಟ್ಟೆ ಕವರ್ ಗಳನ್ನು ಓಪನ್ ಮಾಡಿ ಸಾಕ್ಷಿದಾರರಿಗೆ ತೋರಿಸಿದ್ದು, ಅವುಗಳನ್ನು ಸಾಕ್ಷಿದಾರರು ನೋಡಿ ಗುರುತಿಸಿದ್ದು, ಸದರಿ ಮು.ಮಾ.ಗಳನ್ನು ಮು.ಮಾ.15 ರಿಂದ 22 ಎಂದು ಗುರುತಿಸಲಾಯಿತು. ಆರೋಪಿತರು ತಮ್ಮ ತಮ್ಮ ಬಟ್ಟೆಗಳನ್ನು ಅವರೇ ತೆಗೆದು ಪೋಲೀಸರ ಮುಂದೆ ಹಾಜರುಪಡಿಸಿರುತ್ತಾರೆ. ಪೋಲೀಸರು ಅವುಗಳನ್ನು ಒಂದು ಬಿಳಿ ಬ್ಯಾಗ್ ಒಳಗೆ ಹಾಕಿ, ಚೀಟಿ ಅಂಟಿಸಿ, ಸೀಲ್ ಮಾಡಿ ನಮ್ಮ ಸಹಿ ಪಡೆದಿರುತ್ತಾರೆ.

6. ನಾವು ಸದರಿ ಸ್ಥಳಕ್ಕೆ ಬೆಳಿಗ್ಗೆ 09:30 ಕ್ಕೆ ಹೋಗಿದ್ದು, ಪೋಲೀಸರು ಮಹಜರ್ ಅನ್ನು ಬೆಳಿಗ್ಗೆ 11:30 ರವರೆಗೆ ಬರೆದಿರುತ್ತಾರೆ. ಮಹಜರ್ ಸಮಯದಲ್ಲಿ 5 ನೇ ಆರೋಪಿ 1 ನೇ ಆರೋಪಿಯೊಂದಿಗೆ ಸಂಬಂಧ ಹೊಂದಿದ್ದ ವಿಚಾರವಾಗಿ ಕೊಲೆ ಆಗಿರುವುದು ತಿಳಿದುಬಂದಿರುತ್ತದೆ. ಸಾಕ್ಷಿದಾರರು ನಿಪಿ.6 ರಿಂದ 11 ರವರೆಗೆ ಇರುವ ಫೋಟೋಗಳನ್ನು ನೋಡಿ ಅದೇ ಜಾಗ ಇರುವುದಾಗಿ ಗುರುತಿಸಿರುತ್ತಾರೆ. ಸಾಕ್ಷಿದಾರರು ಕುರಿ ಶೆಡ್ ಇರುವ ಫೋಟೋ ಹಾಗೂ ಶೆಡ್ ನ ಬಳಿ ತಾನು ಹಾಜರಿರುವ ಮತ್ತೆರೆಡು ಫೋಟೋಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ.33 ಮತ್ತು 34 ಎಂದು ಗುರುತಿಸಲಾಯಿತು. ದ್ವಿಚಕ್ರ ವಾಹನಗಳನ್ನು ಹಾಗೂ ಕಾರನ್ನು ಪೋಲೀಸರು ಜಪ್ತಿಪಡಿಸಿ ಠಾಣೆಗೆ ತೆಗೆದುಕೊಂಡು ಬಂದಿರುತ್ತಾರೆ.

<u>ಪಾಟೀ ಸವಾಲುಃ ಆರೋಪಿಪರ ಶ್ರೀ.ಎನ್.ಆರ್.ಎಸ್.ವಕೀಲರಿಂದಃ</u>

ಸಮಯ ಕೋರಿದ್ದು, ಈಗಾಗಲೇ ಸಂಜೆ 05:10 ಸಮಯ ಆದ ಕಾರಣ, ಪಾಟೀ ಸವಾಲನ್ನು ಮುಂದೂಡಲಾಯಿತು.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ.)

ಓ. ಹೇ. ಕೇ. ಸ. ಸಹಿ ಮಾಡಿದ್ದಾರೆ.

(ಎಸ್.ಶ್ರೀಧರ)
9 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.